# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 713(955)
ಸದಸ್ಯರ ಹೆಸರು : ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 27/12/2022
ಉತ್ತರಿಸುವವರು : ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸ್ಥಳೀಯ ಸಂಸ್ಥೆಗಳಾದ ನಗರಸಭೆ, ಪುರಸಭೆ/ಪಟ್ಟಣ ಪಂಚಾಯಿತಿಗಳಲ್ಲಿ ಆಸ್ತಿ ತೆರಿಗೆ ಮತ್ತು ಕಟ್ಟಡಗಳ ತೆರಿಗೆ ಹಾಗೂ ವಾಣಿಜ್ಯ ತೆರಿಗಗಳನ್ನು ಎಂದಿನಿಂದ ಹೆಚ್ಚಿಗೆ ಮಾಡಲಾಗಿದೆಯೇ; (ಮಾಹಿತಿ ನೀಡುವುದು) | ನಗರ ಸ್ಥಳೀಯ ಸಂಸ್ಥೆಗಳಲ್ಲಿ ಚಾಲ್ತಿ ಸಾಲಿನ ಮಾರುಕಟ್ಟೆ ಮಾರ್ಗಸೂಚಿ ಬೆಲೆಗೆ ಅನುಗುಣವಾಗಿ ಆಸ್ತಿ ತೆರಿಗೆ ಜೋಡಣೆ ಮಾಡಲು ಮುನಿಸಿಪಲ್ ಕಾಯ್ದೆಗಳಿಗೆ ತಿದ್ದುಪಡಿ ತರಲಾಗಿದ್ದು, ಸದರಿ ನಿಯಮಗಳನ್ನು 2021-22ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗಿದೆ. ಅದರಂತೆ ಪ್ರತಿ ವರ್ಷ ಆಸ್ತಿ ತೆರಿಗೆ ಪರಿಷ್ಕರಣೆ ಮಾಡಬೇಕಾಗಿರುತ್ತದೆ. |
| ಆ) | ಈ ಹಿಂದೆ ಯಾವ ಪ್ರಮಾಣದಲ್ಲಿ ತೆರಿಗೆ ವಸೂಲು ಮಾಡಲಾಗಿದೆ; (ಅಂಕಿ ಅಂಶಗಳೊಂದಿಗೆ ಮಾಹಿತಿ ನೀಡುವುದು) | ಈ ಹಿಂದೆ, ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯಂತೆ, 2005-06ನೇ ಸಾಲಿನ ಮಾರುಕಟ್ಟೆ ಮಾರ್ಗಸೂಚಿ ಬೆಲೆಗಳ ಆಧಾರದ ಮೇಲೆ ಆಸ್ತಿ ತೆರಿಗೆಯನ್ನು ನಿರ್ಧರಣೆ ಮಾಡಲಾಗುತ್ತಿತ್ತು ಹಾಗೂ ಪ್ರತಿ ಮೂರು ವರ್ಷಗಳಿಗೊಮ್ಮೆ ಆಸ್ತಿ ತೆರಿಗೆಯನ್ನು ಪರಿಷ್ಕರಣೆ ಮಾಡಲಾಗುತ್ತಿತ್ತು.<br><br>ಕಳೆದ ಎರಡು ವರ್ಷಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಂಗ್ರಹವಾದ ಆಸ್ತಿ ತೆರಿಗೆ ವಿವರಗಳನ್ನು ಅನುಬಂಧ-01 ರಲ್ಲಿ ಒದಗಿಸಲಾಗಿದೆ. |
| ಇ) | ಹೆಚ್ಚು ಮಾಡಿರುವ ತೆರಿಗೆಯನ್ನು ಯಾವ ಪ್ರಮಾಣದಲ್ಲಿ ಮತ್ತು ಯಾವ ಮಾನದಂಡವನ್ನು ಅನುಸರಿಸಿ ವಸೂಲು ಮಾಡಲಾಗುತ್ತಿದೆ; (ಸರ್ಕಾರಿ ಆದೇಶ ಸುತ್ತೋಲೆ ಪ್ರತಿಗಳೊಂದಿಗೆ ಸಂಪೂರ್ಣ ಮಾಹಿತಿ ಒದಗಿಸುವುದು) | ಮುನಿಸಿಪಲ್ ಕಾಯ್ದೆಗಳನ್ವಯ ವಿವಿಧ ಸ್ವತ್ತುಗಳಿಗೆ ನಿಗಧಿಪಡಿಸಿರುವ ಕನಿಷ್ಠ ಹಾಗೂ ಗರಿಷ್ಠ ಮಿತಿಗಳಿಗೊಳಪಟ್ಟು ತೆರಿಗೆ ನಿಗಧಿಪಡಿಸಲು ನಗರ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರವಿರುತ್ತದೆ.<br>ದಿನಾಂಕ: 18-02-2021ರ ಕಾಯ್ದೆಗಳ ತಿದ್ದುಪಡಿಯನ್ವಯ ತೆರಿಗೆ ನಿರ್ಧರಣೆ ಮಾಡುವ ಕುರಿತು ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂ: |

| | | |
|---|---|---|
| | | 292724/ಡಿಎಂಎ/ಡಿಇವಿ/ಟ್ಯಾಕ್ಸ್-3/2020 ದಿನಾಂಕ: 19-02-2021 ರಲ್ಲಿ ನಿರ್ದೇಶನ ನೀಡಲಾಗಿದೆ (ಅನುಬಂಧ-2 ರಲ್ಲಿ ಒದಗಿಸಲಾಗಿದೆ). ಅದರಂತೆ ಕ್ರಮವಹಿಸಲಾಗುತ್ತಿದೆ. |
| ಈ) | ಕಳೆದ ಎರಡು ವರ್ಷಗಳಲ್ಲಿ ಈ ಸ್ಥಳೀಯ ಸಂಸ್ಥೆಗಳಿಂದ ಸಂಗ್ರಹಿಸಿರುವ ಒಟ್ಟು ತೆರಿಗೆಯ ಮೊತ್ತವೆಷ್ಟು ಜಿಲ್ಲಾವಾರು ಮಾಹಿತಿ ನೀಡುವುದು; ಹಾಗೆಯೇ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಸ್ಥಳೀಯ ಸಂಸ್ಥೆಗಳವಾರು ಮಾಹಿತಿ ನೀಡುವುದು; | ಕಳೆದ ಎರಡು ವರ್ಷಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಂದ ಸಂಗ್ರಹಿಸಿರುವ ಒಟ್ಟು ತೆರಿಗೆಯ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-01 ರಲ್ಲಿ ಒದಗಿಸಲಾಗಿದೆ.<br><br>ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಸ್ಥಳೀಯ ಸಂಸ್ಥೆಗಳವಾರು ಮಾಹಿತಿಯನ್ನು ಅನುಬಂಧ-03 ರಲ್ಲಿ ನೀಡಲಾಗಿದೆ. |
| ಉ) | ಈ ರೀತಿ ವಸೂಲು ಮಾಡುತ್ತಿರುವ ತೆರಿಗೆ ರಾಜ್ಯದ ಮಹಾನಗರ ಪಾಲಿಕೆಗಳಿಗಿಂತಲೂ ಅತ್ಯಧಿಕವಾಗಿರುವುದರಿಂದ ಸಾರ್ವಜನಿಕ ನಾಗರೀಕರಿಗೆ ಇಷ್ಟೊಂದು ದುಪ್ಪಟ್ಟು ತೆರಿಗೆಯನ್ನು ಪಾವತಿಸಲು ಹೆಚ್ಚಿನ ಹೊರೆಯಾಗಿರುವುದನ್ನು ಮನಗಂಡು ಸರ್ಕಾರ ಹೆಚ್ಚಿಸಿರುವ ತೆರಿಗೆಯನ್ನು ಕಡಿಮೆ ಮಾಡಲು ಕ್ರಮವಹಿಸುವುದೇ? | ಕರ್ನಾಟಕ ಪೌರಸಭೆಗಳ ಕಾಯ್ದೆ 1964 ಹಾಗೂ ಕರ್ನಾಟಕ ಪೌರನಿಗಮಗಳ ಕಾಯ್ದೆ 1976ರ ಅವಕಾಶದಂತೆ ತೆರಿಗೆ ವಿಧಿಸಲಾಗುತ್ತಿದ್ದು, ಪ್ರಸ್ತುತ ಇದನ್ನು ಕಡಿಮೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

ಸಂಖ್ಯೆ: ನಅಇ 339 ಜಿಇಎಲ್ 2022(ಇ)

ಎನ್. ನಾಗರಾಜು (ಎಂ.ಟಿ.ಬಿ)
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

LCQ -955

"ಅನುಬಂಧ -01"

ಆಸ್ತಿ ತೆರಿಗೆ ವಸೂಲಾತಿಯ ವಿವರಗಳು 2021-22 (ತಗಾದೆ, ವಸೂಲಾತಿ ಮತ್ತು ಬಾಕಿ) (ರೂ ಲಕ್ಷಗಳಲ್ಲಿ)

| ಕ್ರಸಂ | ಜಿಲ್ಲೆಯ ಹೆಸರು | ಪ್ರಾರಂಭಿಕ ಶಿಲ್ಕು | 2021-22ನೇ ಸಾಲಿನ ಬೇಡಿಕೆ | ಒಟ್ಟು ಬೇಡಿಕೆ | ಒಟ್ಟು ವಸೂಲಿ | ಒಟ್ಟು ಬಾಕಿ | ಶೇಕಡ (%) |
|---|---|---|---|---|---|---|---|
| 1 | Bagalkot | 522.57 | 2063.51 | 2586.08 | 2097.07 | 489.01 | 81.09 |
| 2 | Ballari | 696.92 | 5372.08 | 6069.00 | 5486.66 | 582.34 | 90.40 |
| 3 | Bangalore Rural | 396.53 | 2251.51 | 2648.04 | 1589.72 | 1058.32 | 60.03 |
| 4 | Bangalore Urban | 602.18 | 3982.53 | 4584.71 | 3101.28 | 1483.43 | 67.64 |
| 5 | Belagavi | 1866.65 | 6366.04 | 8232.69 | 6267.82 | 1964.87 | 76.13 |
| 6 | Bidar | 900.64 | 1761.15 | 2661.79 | 1611.19 | 1050.60 | 60.53 |
| 7 | Chamarajanagara | 305.07 | 935.77 | 1240.84 | 921.44 | 319.40 | 74.26 |
| 8 | Chikkaballapur | 647.73 | 1404.53 | 2052.26 | 1254.56 | 797.70 | 61.13 |
| 9 | Chikkamagaluru | 57.29 | 1359.10 | 1416.39 | 1395.21 | 21.18 | 98.50 |
| 10 | Chitradurga | 808.79 | 1883.53 | 2692.32 | 1853.52 | 838.80 | 68.84 |
| 11 | Dakshina Kannada | 4084.86 | 8605.23 | 12690.09 | 6011.08 | 6679.01 | 47.37 |
| 12 | Davangere | 726.77 | 3494.43 | 4221.20 | 3610.66 | 610.54 | 85.54 |
| 13 | Dharward | 1866.06 | 7934.30 | 9800.36 | 7008.30 | 2792.06 | 71.51 |
| 14 | Gadag | 386.21 | 1573.52 | 1959.73 | 1391.68 | 568.05 | 71.01 |
| 15 | Hassan | 157.48 | 2233.97 | 2391.45 | 2203.81 | 187.64 | 92.15 |
| 16 | Haveri | 558.46 | 5873.59 | 6432.05 | 5829.00 | 603.05 | 90.62 |
| 17 | Kalaburagi | 2527.91 | 4145.49 | 6673.40 | 2888.66 | 3784.74 | 43.29 |
| 18 | Kodagu | 132.36 | 513.81 | 646.17 | 552.83 | 93.34 | 85.56 |
| 19 | Kolar | 297.56 | 1747.45 | 2045.01 | 1696.03 | 348.98 | 82.94 |
| 20 | Koppal | 594.53 | 1167.55 | 1762.08 | 1278.13 | 483.95 | 72.54 |
| 21 | Mandya | 423.24 | 1849.53 | 2272.77 | 1549.96 | 722.81 | 68.20 |
| 22 | Mysore | 8381.51 | 16957.61 | 25339.12 | 19636.35 | 5702.77 | 77.49 |
| 23 | Raichur | 397.65 | 1924.94 | 2322.59 | 1885.20 | 437.39 | 81.17 |
| 24 | Ramanagara | 602.14 | 1674.05 | 2276.19 | 1573.96 | 702.23 | 69.15 |
| 25 | Shivamogga | 75.96 | 4223.57 | 4299.53 | 4650.35 | 78.67 | 108.16 |
| 26 | Tumkur | 588.87 | 4674.34 | 5263.21 | 4776.11 | 487.10 | 90.75 |
| 27 | Udupi | 340.32 | 1823.71 | 2164.03 | 1955.57 | 208.46 | 90.37 |
| 28 | Uttara Kannada | 385.19 | 1487.67 | 1872.86 | 1266.70 | 606.16 | 67.63 |
| 29 | Vijayapur | 858.86 | 4225.07 | 5083.93 | 4171.47 | 912.46 | 82.05 |
| 30 | Yadgiri | 350.07 | 780.30 | 1130.37 | 471.12 | 659.25 | 41.68 |
| | **Total** | **30540.38** | **104289.88** | **134830.26** | **99985.45** | **35274.29** | **74.16** |

26/12/22

Assistant Director (Development)
Directorate of Municipal
Administration
Bengaluru

"ಅನುಬಂಧ -01"

## ಆಸ್ತಿ ತೆರಿಗೆ ವಸೂಲಾತಿಯ ವಿವರಗಳು 2020-21 (ತಗಾದೆ, ವಸೂಲಾತಿ ಮತ್ತು ಬಾಕಿ) (ರೂ ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆಯ ಹೆಸರು | ಪ್ರಾರಂಭಿಕ ಶಿಲ್ಕು | 2020-21ನೇ ಸಾಲಿನ ಬೇಡಿಕೆ | ಒಟ್ಟು ಬೇಡಿಕೆ | ಒಟ್ಟು ವಸೂಲಿ | ಒಟ್ಟು ಬಾಕಿ | ಶೇಕಡ (%) |
|---|---|---|---|---|---|---|---|
| 1 | Bagalkot | 412.75 | 1894.20 | 2306.95 | 1800.01 | 506.94 | 78.03 |
| 2 | Ballari | 915.18 | 4713.57 | 5628.75 | 4920.27 | 708.48 | 87.41 |
| 3 | Bangalore Rural | 80.91 | 2137.80 | 2218.71 | 1664.87 | 553.84 | 75.04 |
| 4 | Bangalore Urban | 110.37 | 3904.67 | 4015.04 | 3546.04 | 469.00 | 88.32 |
| 5 | Belagavi | 1046.67 | 6037.65 | 7084.32 | 5212.57 | 1871.75 | 73.58 |
| 6 | Bidar | 371.14 | 1600.46 | 1971.60 | 1052.61 | 919.00 | 53.39 |
| 7 | Chamarajanagara | 232.20 | 846.06 | 1078.26 | 784.73 | 293.53 | 72.78 |
| 8 | Chikkaballapur | 421.49 | 1412.99 | 1834.48 | 1144.99 | 689.49 | 62.41 |
| 9 | Chikkamagaluru | 140.83 | 1251.74 | 1392.57 | 1331.05 | 61.52 | 95.58 |
| 10 | Chitradurga | 517.72 | 2095.33 | 2613.05 | 1612.45 | 1000.60 | 61.71 |
| 11 | Dakshina Kannada | 3142.41 | 8500.31 | 11642.72 | 7570.37 | 4072.35 | 65.02 |
| 12 | Davangere | 791.67 | 3183.53 | 3975.20 | 3793.62 | 181.58 | 95.43 |
| 13 | Dharward | 1545.11 | 8118.50 | 9663.61 | 6535.09 | 3128.52 | 67.63 |
| 14 | Gadag | 158.87 | 1483.38 | 1642.25 | 1268.86 | 373.39 | 77.26 |
| 15 | Hassan | 124.46 | 2020.61 | 2145.07 | 1987.59 | 157.48 | 92.66 |
| 16 | Haveri | 223.41 | 1292.24 | 1515.65 | 1299.80 | 215.85 | 85.76 |
| 17 | Kalaburagi | 1770.01 | 3853.87 | 5623.88 | 2885.28 | 2738.60 | 51.30 |
| 18 | Kodagu | 110.29 | 519.82 | 630.11 | 496.58 | 133.53 | 78.81 |
| 19 | Kolar | 339.99 | 1610.37 | 1950.36 | 1675.53 | 274.83 | 85.91 |
| 20 | Koppal | 646.35 | 1243.77 | 1890.12 | 1322.81 | 567.31 | 69.99 |
| 21 | Mandya | 164.23 | 1776.37 | 1940.60 | 1498.74 | 441.86 | 77.23 |
| 22 | Mysore | 5085.13 | 16502.89 | 21588.02 | 13310.61 | 8277.41 | 61.66 |
| 23 | Raichur | 425.70 | 2171.80 | 2597.50 | 2135.64 | 461.86 | 82.22 |
| 24 | Ramanagara | 359.68 | 1597.92 | 1957.60 | 1355.46 | 602.14 | 69.24 |
| 25 | Shivamogga | 265.59 | 3509.78 | 3775.37 | 3698.98 | 76.39 | 97.98 |
| 26 | Tumkur | 1619.32 | 4345.39 | 5964.71 | 4599.08 | 1365.63 | 77.10 |
| 27 | Udupi | 57.06 | 1954.25 | 2011.31 | 1657.82 | 353.49 | 82.42 |
| 28 | Uttara Kannada | 369.70 | 1565.68 | 1935.38 | 1479.80 | 455.58 | 76.46 |
| 29 | Vijayapur | 269.76 | 2716.25 | 2986.01 | 2509.54 | 476.48 | 84.04 |
| 30 | Yadgiri | 251.02 | 559.21 | 810.23 | 468.26 | 341.97 | 57.79 |
| | **Total** | **43615.74** | **188336.65** | **231952.39** | **169115.37** | **62837.02** | **72.91** |

26/12/22

Assistant Director (Development)
Directorate of Municipal
Administration
Bengaluru

ಅನುಬಂಧ - 2

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22863576 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂಖ್ಯೆ: 292724 DMA /DEV/TAX/3/2020

ದಿನಾಂಕ:19- 02-2021

## ಸುತ್ತೋಲೆ

ವಿಷಯ: ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ಮತ್ತು ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ, 1976ರಲ್ಲಿ ತಿದ್ದುಪಡಿಯಾದಂತೆ 2021-22 ಸಾಲಿನಿಂದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಸ್ತಿ ತೆರಿಗೆ ವಿಧಿಸಿ ಜಾರಿಗೊಳಿಸುವ ಕುರಿತು.

ಉಲ್ಲೇಖ: ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಮತ್ತು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ 1976 (ತಿದ್ದುಪಡಿ) 2021 ದಿನಾಂಕ: 18.02.2021

******

ಕರ್ನಾಟಕ ರಾಜ್ಯವು ಜಿ.ಎಸ್.ಡಿ.ಪಿಯ ಶೇಕಡಾ 0.25 ರಷ್ಟು ಹೆಚ್ಚುವರಿ ಸಾಲ ಪಡೆಯಲು ಮತ್ತು 15 ನೇ ಹಣಕಾಸು ಆಯೋಗದ ಅನುದಾನ ಪಡೆಯುವ ನಿಟ್ಟಿನಲ್ಲಿ ಅರ್ಹರಾಗಲು ಮತ್ತು ನಗರ ಸ್ಥಳೀಯ ಸಂಸ್ಥೆಗಳನ್ನು ಆರ್ಥಿಕವಾಗಿ ಸದೃಢಗೊಳಿಸುವ ನಿಟ್ಟಿನಲ್ಲಿ ಆಸ್ತಿ ತೆರಿಗೆಯನ್ನು ಚಾಲ್ತಿ ಸಾಲಿನ ಮಾರುಕಟ್ಟೆ ಮಾರ್ಗಸೂಚಿ ಬೆಲೆಯ ಆಧಾರದ ಮೇಲೆ ವಿಧಿಸಲು ಕೇಂದ್ರ ಸರ್ಕಾರವು ನಿರ್ದೇಶಿಸಿರುತ್ತದೆ. ಉಲ್ಲೇಖಿದಂತೆ ಪೌರಸಭೆಗಳ ಅಧಿನಿಯಮ, 1964 ರ ಕಲಂ 101, 102 ಮತ್ತು 102ಎ ಗಳಿಗೆ ಮತ್ತು ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ, 1976 ರ ಕಲಂ 108, 109 ಮತ್ತು 109ಎ ಗಳಿಗೆ ತಿದ್ದುಪಡಿ ಮಾಡಿದ್ದು, ಸದರಿ ಕಾಯ್ದೆಗಳ ತಿದ್ದುಪಡಿ ಪ್ರತಿಗಳನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಲಾಗಿರುತ್ತದೆ. ಕಾಯ್ದೆಯಲ್ಲಿನ ತಿದ್ದುಪಡಿಯ ಪ್ರಮುಖ ಅಂಶಗಳು ಈ ಕೆಳಕಂಡಂತಿರುತ್ತವೆ.

1) ಸ್ವತ್ತಿನ ಮೂಲ ಮೌಲ್ಯವನ್ನು ಕರ್ನಾಟಕ ಸ್ಟಾಂಪುಗಳ ಅಧಿನಿಯಮ, 1957 ರ ಸೆಕ್ಷನ್ 45ಬಿ ರಡಿಯಲ್ಲಿ ಪ್ರಕಟಿಸಲಾದ ಚಾಲ್ತಿ ಸಾಲಿನ ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿ ಬೆಲೆಯ ಶೇ.25 ನ್ನು ಪರಿಗಣಿಸುವುದು.

2) ವಾಸದ ಮತ್ತು ವಾಣಿಜ್ಯೇತರ ಕಟ್ಟಡಗಳಿಗೆ ಸ್ವತ್ತು ತೆರಿಗೆಯನ್ನು ಕಟ್ಟಡದ ಮೂಲಬೆಲೆಯ ಶೇ.0.2 ಕ್ಕಿಂತ ಕಡಿಮೆ ಇಲ್ಲದಂತೆ ಹಾಗೂ ಶೇ.1.5 ಕ್ಕಿಂತ ಹೆಚ್ಚಿಗೆ ಇಲ್ಲದಂತೆ ವಿಧಿಸವುದು.

3) ಕಟ್ಟಡಕ್ಕೆ ಹೊಂದಿಕೊಂಡಿರುವ ಇರುವ 1000 ಚ.ಅ ವರೆಗಿನ ಖಾಲಿ ಭೂಮಿಗೆ ವಿನಾಯತಿಯನ್ನು ನೀಡುವುದು ಮತ್ತು 1000 ಚ.ಅ ಗಿಂತ ಹೆಚ್ಚಿರುವ ಖಾಲಿ ಭೂಮಿಗೆ ಸ್ವತ್ತು ತೆರಿಗೆಯನ್ನು ಖಾಲಿ ಭೂಮಿಗೆ ವಿಧಿಸುವ ಆಸ್ತಿ ತೆರಿಗೆ ದರದಲ್ಲಿ ವಿಧಿಸುವುದು.

4) ಖಾಲಿ ಭೂಮಿಗೆ ಸಂಬಂಧಪಟ್ಟಂತೆ ತೆರಿಗೆಗೆ ಗುರಿಯಾಗತಕ್ಕ ಭೂಮಿಯ ಮೂಲ ಬೆಲೆಯ ಶೇ.0.2 ಕ್ಕಿಂತ ಕಡಿಮೆ ಇಲ್ಲದಂತೆ ಮತ್ತು ಶೇ.0.5 ಕ್ಕಿಂತ ಹೆಚ್ಚಿಗೆ ಇಲ್ಲದಂತೆ ವಿಧಿಸುವುದು.

5) ಕರ್ನಾಟಕ ಸ್ಟಾಂಪುಗಳ ಅಧಿನಿಯಮ, 1957 ರ ಸೆಕ್ಷನ್ 45ಬಿ ರಡಿಯಲ್ಲಿ ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿ ಬೆಲೆಗಳನ್ನು ಪರಿಷ್ಕರಣೆ ಮಾಡದ ಹಣಕಾಸು ವರ್ಷದಲ್ಲಿ ಬೇರೆ ಬೇರೆ ಪ್ರದೇಶಗಳಿಗೆ ಹಾಗೂ ಬೇರೆ ಬೇರೆ ಕಟ್ಟಡಗಳು ಮತ್ತು ಭೂಮಿಗಳ ವರ್ಗಗಳಿಗೆ ಬೇರೆ ಬೇರೆ ದರಗಳಲ್ಲಿ ಆಸ್ತಿ ತೆರಿಗೆಯನ್ನು ಶೇ. 3ರಿಂದ ಶೇ. 5 ರಷ್ಟನ್ನು ಹೆಚ್ಚಳ ಮಾಡುವುದು.

ಆಸ್ತಿ ತೆರಿಗೆಯು ನಗರ ಸ್ಥಳೀಯ ಸಂಸ್ಥೆಗಳನ್ನು ಆರ್ಥಿಕವಾಗಿ ಬಲಪಡಿಸಲು ಬಹು ಮುಖ್ಯ ಆದಾಯದ ಮೂಲವಾಗಿದ್ದು, ಕಾಯ್ದೆಗಳಲ್ಲಿ ತಿದ್ದುಪಡಿಯಾಗಿರುವ ಅಂಶಗಳನ್ನು ಪರಿಗಣಿಸಿ ಪ್ರಸಕ್ತ ಸಾಲಿನಲ್ಲಿ ಇರುವ ಆಸ್ತಿ ತೆರಿಗೆಯ ಬೇಡಿಕೆಗಿಂತ ಕಡಿಮೆಯಾಗದ ರೀತಿಯಲ್ಲಿ ಮತ್ತು ಸಾರ್ವಜನಿಕರಿಗೆ ಹೆಚ್ಚಿನ ಹೊರೆಯಾಗದ ರೀತಿಯಲ್ಲಿ ತೆರಿಗೆ ವಿಧಿಸಲು ಕ್ರಮವಹಿಸಿ 2021-22 ನೇ ಸಾಲಿನಿಂದ ಆಸ್ತಿ ತೆರಿಗೆಯನ್ನು ನಿಗಧಿಪಡಿಸುವ ಬಹು ಮುಖ್ಯ ಜವಾಬ್ದಾರಿ ನಗರ ಸ್ಥಳೀಯ ಸಂಸ್ಥೆಗಳದ್ದಾಗಿರುತ್ತದೆ. 2021-22 ನೇ ಸಾಲಿನಿಂದ ನಗರ ಸ್ಥಳೀಯ ಸಂಸ್ಥೆಗಳು ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಆಸ್ತಿ ತೆರಿಗೆಯನ್ನು ನಿಗಧಿಪಡಿಸಲು ಸೂಚಿಸಿದೆ.

i) ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ರ ಕಲಂ 101 ರ ಉಪ ಪ್ರಕರಣ (3) ಮತ್ತು ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ, 1976 ರ ಕಲಂ 108 ರ ಉಪ ಪ್ರಕರಣ (3) ರಲ್ಲಿ ಆಸ್ತಿ ತೆರಿಗೆಯನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಮತ್ತು ಕಟ್ಟಡಗಳ ಮತ್ತು ಭೂಮಿಗಳ ಬೇರೆ ಬೇರೆ ವರ್ಗಗಳಿಗೆ ಬೇರೆ ಬೇರೆ ಶೇಕಡಾವಾರು ಆಸ್ತಿ ತೆರಿಗೆ ದರವನ್ನು ನಿಗಧಿಪಡಿಸಲು ಅವಕಾಶ ಕಲ್ಪಿಸಲಾಗಿದ್ದು, ಅದರಂತೆ ಪ್ರದೇಶವಾರು ಆಸ್ತಿ ತೆರಿಗೆ ದರಗಳನ್ನು ನಿಗಧಿಪಡಿಸಬಹುದಾಗಿದೆ.

ii) ನಾಗರೀಕರಿಗೆ ಪ್ರಸ್ತುತ ಇರುವ ಆಸ್ತಿ ತೆರಿಗೆಗಿಂತ ಹೆಚ್ಚಿನ ಹೊರೆಯಾಗದಂತೆ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಆಸ್ತಿ ತೆರಿಗೆಯ ಪ್ರಸ್ತುತ ಬೇಡಿಕೆಗಿಂತ ಕಡಿಮೆಯಾಗದಂತೆ ಕ್ರಮವಹಿಸುವುದು. ಅದರಲ್ಲೂ, ಪ್ರಮುಖವಾಗಿ ಕೊಳಚೆ ಪ್ರದೇಶಗಳನ್ನು ಮತ್ತು ಆರ್ಥಿಕವಾಗಿ ಹಿಂದುಳಿದವರು ವಾಸಿಸುವ ಪ್ರದೇಶಗಳಲ್ಲಿ ಹೆಚ್ಚಿನ ಹೊರೆಯಾಗದಂತೆ ಆಸ್ತಿ ತೆರಿಗೆ ದರಗಳನ್ನು ನಿಗಧಿಪಡಿಸುವುದು.

iii) ತೆರಿಗೆ ದರಗಳನ್ನು ನಿಗಧಿಪಡಿಸುವ ಪೂರ್ವದಲ್ಲಿ ನಿಖರವಾಗಿ ಲೆಕ್ಕಾಚಾರ ಮಾಡಿ ಕೌನ್ಸಿಲ್ ಸಭೆಯಲ್ಲಿ ಮಂಡಿಸಿ ಆಸ್ತಿ ತೆರಿಗೆಯನ್ನು ನಿಗಧಿಪಡಿಸಲು ಕ್ರಮವಹಿಸುವುದು. ಅನುಬಂಧ-1 ರಲ್ಲಿ 2021-22 ನೇ ಸಾಲಿಗೆ ಲೆಕ್ಕಾಚಾರ ಮಾಡುವ ನಿಟ್ಟಿನಲ್ಲಿ ಸಹಾಯವಾಗಲು ಉದಾಹರಣೆಗಳ ಸಹಿತ ವಿವರಿಸಲಾಗಿದೆ.

iv) 2021-22 ನೇ ಸಾಲಿಗೆ ಕಾಯ್ದೆಯ ತಿದ್ದುಪಡಿಯಂತೆ ಮೊದಲ ಬಾರಿಗೆ ಆಸ್ತಿ ತೆರಿಗೆ ದರಗಳನ್ನು ನಿಗಧಿಪಡಿಸುತ್ತಿದ್ದು, ಚಾಲ್ತಿ ಸಾಲಿನಲ್ಲಿ ಮಾರುಕಟ್ಟೆ ಮಾರ್ಗಸೂಚಿ ಬೆಲೆಗಳು ಪರಿಷ್ಕರಣೆಯಾಗದೇ ಇದ್ದಲ್ಲಿ ಹಿಂದಿನ ಸಾಲಿನ ಮಾರ್ಗಸೂಚಿ ಬೆಲೆಯನ್ನು ಚಾಲ್ತಿ ಸಾಲಿನ ಮಾರ್ಗಸೂಚಿ ಬೆಲೆಯೆಂದು ಪರಿಗಣಿಸುವುದು. 2021-22 ನೇ ಸಾಲಿಗೆ ಶೇಕಡಾ 3 ರಿಂದ 5 ರವರೆಗೆ ತೆರಿಗೆಯನ್ನು ಹೆಚ್ಚಳ ಮಾಡಬಾರದು.

v) ಖಾಲಿ ನಿವೇಶನಗಳಿಗೆ, ವಾಸದ ಕಟ್ಟಡಗಳಿಗೆ ಮತ್ತು ವಾಣಿಜ್ಯ ಕಟ್ಟಡಗಳಿಗೆ ಆಸ್ತಿ ತೆರಿಗೆ ದರಗಳನ್ನು ನಿಗಧಿಪಡಿಸಲು ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ರ ಕಲಂ 101 ಮತ್ತು ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ, 1976 ರ ಕಲಂ 108 ರಲ್ಲಿ ನಗರ

ಸ್ಥಳೀಯ ಸಂಸ್ಥೆಗಳಿಗೆ ನೀಡಿರುವ ವಿವೇಚನಾಧಿಕಾರವನ್ನು ಬಳಸಿ ಪ್ರಸ್ತುತ ವಿಧಿಸುತ್ತಿರುವ ಆಸ್ತಿ ತೆರಿಗೆಗಿಂತ ಕಡಿಮೆಯಾಗದಂತೆ ತೆರಿಗೆಯ ದರಗಳನ್ನು ನಿಗಧಿಪಡಿಸಲು ಕ್ರಮವಹಿಸುವುದು.

vi) 2021-22 ನೇ ಸಾಲಿನಿಂದ ಬಾಕಿ ಇರುವ ಆಸ್ತಿ ತೆರಿಗೆಯನ್ನು ಆಯಾ ಸಾಲುಗಳಲ್ಲಿನ ಆಸ್ತಿ ತೆರಿಗೆ ಪದ್ಧತಿಯಂತೆ ಲೆಕ್ಕಾಚಾರ ಮಾಡಲು ಕ್ರಮವಹಿಸುವುದು.

ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪರಿಣಾಮಕಾರಿಯಾಗಿ ಆಸ್ತಿ ತೆರಿಗೆಯನ್ನು ನಿಗಧಿಪಡಿಸುವ ನಿಟ್ಟಿನಲ್ಲಿ **ಅನುಬಂಧ-2** ರಲ್ಲಿ ತಿಳಿಸಿರುವ ಅಧಿಕಾರಿ / ಸಿಬ್ಬಂದಿಗಳನ್ನು ಜಿಲ್ಲಾವಾರು ನೋಡಲ್ ಅಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದ್ದು, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರುಗಳು ಸದರಿ ನೋಡಲ್ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿಕೊಂಡು ಈ ಕೆಳಕಂಡಂತೆ ಸೂಕ್ತ ಕ್ರಮವಹಿಸವುದು.

ಅ) ನೋಡಲ್ ಅಧಿಕಾರಿಗಳು ಮೇಲ್ಕಾಣಿಸಿದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಚಾಲ್ತಿ ಸಾಲಿನ ಮಾರುಕಟ್ಟೆ ಮಾರ್ಗಸೂಚಿ ಬೆಲೆಗಳಿಗೆ ಕಾಯ್ದೆಗಳಲ್ಲಿ ತಿಳಿಸಲಾಗಿರುವ ಆಸ್ತಿ ತೆರಿಗೆ ದರಗಳ ಮಿತಿಯೊಳಗೆ ನಿಗಧಿಪಡಿಸುವ ಕುರಿತಂತೆ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿ / ಸಿಬ್ಬಂದಿಗಳಿಗೆ ಸಂಪೂರ್ಣವಾಗಿ ತರಬೇತಿಯನ್ನು ನೀಡುವುದು.

ಆ) ನಗರ ಸ್ಥಳೀಯ ಸಂಸ್ಥೆಗಳು ಹೊಸದಾಗಿ ಆಸ್ತಿ ತೆರಿಗೆಯನ್ನು ನಿಗಧಿಪಡಿಸುವ ನಿಟ್ಟಿನಲ್ಲಿ ನೋಡಲ್ ಅಧಿಕಾರಿಗಳು ಸೂಕ್ತ ಸಲಹೆಗಳನ್ನು ನೀಡುವುದು.

ಇ) ಯೋಜನಾ ನಿರ್ದೇಶಕರುಗಳು ನಗರ ಸ್ಥಳೀಯ ಸಂಸ್ಥೆಗಳು ತೆರಿಗೆ ನಿರ್ಧರಣೆಗೆ ಪೂರ್ವಭಾವಿಯಾಗಿ ಲೆಕ್ಕಾಚಾರ ಮಾಡುವ ಸಂದರ್ಭದಲ್ಲಿ ಸೂಕ್ತ ಸಲಹೆ ಸೂಚನೆಗಳನ್ನು ನೀಡುವುದು.

ಈ) ನಗರ ಸ್ಥಳೀಯ ಸಂಸ್ಥೆಗಳಿಗೆ ಭೇಟಿ ನೀಡಿ ಖುದ್ದಾಗಿ ಪರಿಶೀಲಿಸಿ ನೋಡಲ್ ಅಧಿಕಾರಿಗಳ ಸಮನ್ವಯದೊಂದಿಗೆ ಮೇಲ್ವಿಚಾರಣೆ ಮಾಡಿ ತೆರಿಗೆ ದರಗಳನ್ನು ನಿಗಧಿಪಡಿಸಿರುವುದು ಸರಿಯಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.

ನಗರ ಸ್ಥಳೀಯ ಸಂಸ್ಥೆಯ ಆರ್ಥಿಕ ಸಂಪನ್ಮೂಲವನ್ನು ಹೆಚ್ಚಿಸಿ ಆರ್ಥಿಕವಾಗಿ ಸದೃಢಗೊಳಿಸುವ ಜವಾಬ್ದಾರಿಯು ಮುನಿಸಿಪಲ್ ಕೌನ್ಸಿಲ್‌ಗೆ ಇರುತ್ತದೆ. ಕಾಯ್ದೆಗಳಿಗೆ ತಿದ್ದುಪಡಿಯಾದಂತೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಸ್ತಿ ತೆರಿಗೆಯನ್ನು ವಿಧಿಸಲು ಕ್ರಮಕೈಗೊಳ್ಳಬೇಕಿರುತ್ತದೆ. ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರು ವಿವಿಧ ವರ್ಗದ ಆಸ್ತಿಗಳಿಗೆ ತೆರಿಗೆ ದರಗಳನ್ನು ನಿಗಧಿಪಡಿಸುವ ಬಗ್ಗೆ ಸೂಕ್ತ ಮಾಹಿತಿ ಮತ್ತು ದಾಖಲೆಗಳೊಂದಿಗೆ ದಿನಾಂಕ: 05-03-2021 ರೊಳಗೆ ಕೌನ್ಸಿಲ್ ಸಭೆಗೆ ಮಂಡಿಸಿ ಅನುಮೋದನೆ ಪಡೆಯುವುದು. ಆಸ್ತಿ ತೆರಿಗೆ ಲೆಕ್ಕಾಚಾರ ತಂತ್ರಾಂಶದಲ್ಲಿ ಕಾಯ್ದೆಗಳ ತಿದ್ದುಪಡಿಗಳಂತೆ ಬದಲಾವಣೆಗಳನ್ನು ಮಾಡಿದ್ದು, ನಗರ ಸ್ಥಳೀಯ ಸಂಸ್ಥೆಗಳ ಹಂತದಲ್ಲಿ ತಂತ್ರಾಂಶದಲ್ಲು ಅಳವಡಿಸಲು ಕ್ರಮವಹಿಸಬೇಕಾಗಿದ್ದು, ಕೌನ್ಸಿಲ್ ಸಭೆಯಲ್ಲಿ ಅನುಮೋದನೆಯಾದ ನಂತರ ಆಸ್ತಿ ತೆರಿಗೆ ದರಗಳನ್ನು ಮತ್ತು ಮಾರ್ಗಸೂಚಿ ಬೆಲೆಗಳನ್ನು ಆಸ್ತಿ ತೆರಿಗೆ ಲೆಕ್ಕಾಚಾರ ತಂತ್ರಾಂಶದಲ್ಲಿ ಅಳವಡಿಸಲು ಸೂಕ್ತ ಕ್ರಮವಹಿಸುವುದು. ಚಾಲ್ತಿ ಸಾಲಿನ ಮಾರುಕಟ್ಟೆ ಮಾರ್ಗಸೂಚಿ ಬೆಲೆಗಳನ್ನು ಆಧರಿಸಿ ಆಸ್ತಿ ತೆರಿಗೆಯನ್ನು ವಿಧಿಸುವುದರಿಂದ ಸ್ಥಳೀಯ ಸಂಸ್ಥೆಗಳ ಆರ್ಥಿಕವಾಗಿ ಸ್ವಾವಲಂಬಿಯಾಗಲು, ಸಾರ್ವಜನಿಕರಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸಹಕಾರಿಯಾಗುವುದು. ಆದ್ದರಿಂದ 2021-22 ನೇ ಸಾಲಿನಿಂದ ಕಾಯ್ದೆಯ ತಿದ್ದುಪಡಿಯಂತೆ ನಗರ ಸ್ಥಳೀಯ ಸಂಸ್ಥೆಗಳು ಆಸ್ತಿ ತೆರಿಗೆಯನ್ನು ನಿಗಧಿಪಡಿಸಿ ಅನುಷ್ಠಾನಗೊಳಿಸಬೇಕಾಗಿರುತ್ತದೆ. ಇಲ್ಲವಾದಲ್ಲಿ ಕೇಂದ್ರ ಸರ್ಕಾರವು **2021-22** ನೇ

ಸಾಲಿನಿಂದ 15 ನೇ ಹಣಕಾಸು ಆಯೋಗದ ಅನುದಾನವನ್ನು ಮತ್ತು ಸ್ವಚ್ಛ ಭಾರತ ಮಿಷನ್ -2.0 ಯೋಜನೆಯ ಅನುದಾನವನ್ನು ನಿಲ್ಲಿಸಲಿದ್ದು, ರಾಜ್ಯ ಹಣಕಾಸು ಆಯೋಗದ ಅನುದಾನವನ್ನು ತಡೆಹಿಡಿಯಲು ಕ್ರಮವಹಿಸಲಾಗುವುದು.

ನಗರ ಸ್ಥಳೀಯ ಸಂಸ್ಥೆಗಳು ಆಸ್ತಿ ತೆರಿಗೆ ನಿಗಧಿಪಡಿಸಲಾದ ಕೌನ್ಸಿಲ್ ಸಭೆಯ ಠರಾವು ಪ್ರತಿಯನ್ನು ದಿನಾಂಕ: **08-03-2021** ರೊಳಗೆ ಜಿಲ್ಲಾ ನಗರಾಭಿವೃದ್ಧಿ ಕೋಶಕ್ಕೆ ಸಲ್ಲಿಸುವುದು ಹಾಗೂ ಆಸ್ತಿ ತೆರಿಗೆ ದರಗಳ ಮಾಹಿತಿಯನ್ನು ಸಾರ್ವಜನಿಕರ ಗಮನಕ್ಕೆ ಬರುವಂತೆ ಪ್ರಕಟಿಸಲು ಸೂಕ್ತ ಕ್ರಮವಹಿಸುವುದು. ಜಿಲ್ಲಾ ನಗರಾಭಿವೃದ್ಧಿ ಕೋಶಗಳು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಮಾಹಿತಿಯನ್ನು ಕ್ರೋಢೀಕರಿಸಿ ದಿನಾಂಕ: **12-03-2021** ರೊಳಗೆ ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಸವುದು.

ನಗರ ಸ್ಥಳೀಯ ಸಂಸ್ಥೆಗಳ ಆರ್ಥಿಕ ಸಬಲೀಕರಣಕ್ಕೆ ಕಾಯ್ದೆಗಳನ್ವಯ ಪ್ರತೀ ಹಣಕಾಸು ವರ್ಷ ಚಾಲ್ತಿ ಸಾಲಿನ ಮಾರುಕಟ್ಟೆ ಮಾರ್ಗಸೂಚಿ ಬೆಲೆಗಳನ್ನು ಆಧರಿಸಿ ಆಸ್ತಿ ತೆರಿಗೆಯನ್ನು ನಿಯಮಾನುಸಾರ ಪರಿಷ್ಕರಣೆ ಮಾಡಬೇಕಿದ್ದು, ಮಾರ್ಚ್ ಮಾಹೆಯ ಮೊದಲ ವಾರದಲ್ಲಿ ಚಾಲ್ತಿಯಲ್ಲಿರುವ ಮಾರುಕಟ್ಟೆ ಮಾರ್ಗಸೂಚಿ ಬೆಲೆಗಳನ್ನು ಆಧರಿಸಿ ಮುಂದಿನ ಹಣಕಾಸು ವರ್ಷದ ಆಸ್ತಿ ತೆರಿಗೆಯನ್ನು ನಿಗಧಿಪಡಿಸುವುದು. ಒಂದು ವೇಳೆ ಮಾರ್ಚ್ ಮಾಹೆಯ ಮೊದಲ ವಾರದಲ್ಲಿ ಮಾರುಕಟ್ಟೆ ಮಾರ್ಗಸೂಚಿ ಬೆಲೆಗಳು ಪರಿಷ್ಕರಣೆ ಆಗದಿದ್ದಲ್ಲಿ ಸಂಬಂಧಿಸಿದ ಉಪನೋಂದಣಾಧಿಕಾರಿಗಳ ಕಛೇರಿಯಿಂದ ಪತ್ರ ಮುಖೇನ ದೃಢೀಕರಿಸಿಕೊಂಡು ನಿಯಮಾನುಸಾರ ಶೇ.3 ಕ್ಕಿಂತ ಕಡಿಮೆ ಇಲ್ಲದಂತೆ ಮತ್ತು ಶೇ. 5 ಕ್ಕಿಂತ ಹೆಚ್ಚಿಗೆ ಇಲ್ಲದಂತೆ ಆಸ್ತಿ ತೆರಿಗೆಯನ್ನು ಹೆಚ್ಚಳ ಮಾಡಿ ಕೌನ್ಸಿಲ್ ಠರಾವು ಪ್ರತಿಯನ್ನು ಪೌರಾಡಳಿತ ನಿರ್ದೇಶನಾಲಯಕ್ಕೆ ಕಳುಹಿಸಿಕೊಡುವುದು. ಈ ಕುರಿತು ನಿಯಮಾನುಸಾರ ಕ್ರಮವಹಿಸುವಲ್ಲಿ ವಿಫಲರಾದ ಮತ್ತು ವಿಳಂಬಕ್ಕೆ ಕಾರಣರಾದ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರನ್ನು ಆರ್ಥಿಕ ನಷ್ಟಕ್ಕೆ ಜವಾಬ್ದಾರರನ್ನಾಗಿ ಮಾಡಿ ಅಂತಹವರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

1537
20 FEB 2021

(ಸಹಿ)
ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು

ಇವರಿಗೆ :

1) ರಾಜ್ಯದ ಎಲ್ಲಾ ಯೋಜನಾ ನಿರ್ದೇಶಕರುಗಳು, ಜಿಲ್ಲಾ ನಗರಾಭಿವೃದ್ಧಿ ಕೋಶ.
2) ರಾಜ್ಯದ ಎಲ್ಲಾ ಆಯುಕ್ತರು / ಪೌರಾಯುಕ್ತರು / ಮುಖ್ಯಾಧಿಕಾರಿಗಳು, ಮಹಾನಗರಪಾಲಿಕೆ / ನಗರಸಭೆ/ ಪುರಸಭೆ/ ಪಟ್ಟಣ ಪಂಚಾಯತಿ.

ಪ್ರತಿಯನ್ನು:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ.
3) ಜಂಟಿ ನಿರ್ದೇಶಕರು (ಸುಧಾರಣೆ), ಕೆಎಂಡಿಎಸ್, ಬೆಂಗಳೂರುರವರಿಗೆ ಸೂಕ್ತ ಕ್ರಮಕ್ಕಾಗಿ.

"ಅನುಬಂಧ - ೩"

| District | ULB | Type | ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳ ಆಸ್ತಿ ತೆರಿಗೆ ವಸೂಲಾತಿಯ ವಿವರಗಳು (ತಗಾದೆ, ವಸೂಲಾತಿ ಮತ್ತು ಬಾಕಿ) (ರೂ ಲಕ್ಷಗಳಲ್ಲಿ) | | | | | | | | | | | |
|---|---|---|---|---|---|---|---|---|---|---|---|---|---|---|
| | | | 2020-21 ನೇ ಸಾಲು | | | | | | 2021-22 ನೇ ಸಾಲು | | | | | |
| | | | ಪ್ರಾರಂಭಿಕ ಶಿಲ್ಕು | 2020-21ನೇ ಸಾಲಿನ ಬೇಡಿಕೆ | ಒಟ್ಟು ಬೇಡಿಕೆ | ಒಟ್ಟು ವಸೂಲಿ | ಒಟ್ಟು ಬಾಕಿ | ಶೇಕಡ (%) | ಪ್ರಾರಂಭಿಕ ಶಿಲ್ಕು | 2021-22ನೇ ಸಾಲಿನ ಬೇಡಿಕೆ | ಒಟ್ಟು ಬೇಡಿಕೆ | ಒಟ್ಟು ವಸೂಲಿ | ಒಟ್ಟು ಬಾಕಿ | ಶೇಕಡ (%) |
| Chamarajanag | Chamarajanagar | CMC | 136.10 | 350.66 | 486.76 | 377.46 | 109.30 | 77.55 | 109.30 | 403.26 | 512.56 | 467.84 | 44.72 | 91.28 |
| Chamarajanag | Gundlupete | TMC | 70.10 | 290.00 | 360.10 | 191.99 | 168.11 | 53.32 | 168.11 | 298.70 | 466.81 | 230.08 | 236.73 | 49.29 |
| Chamarajanag | Hannur | TP | 0.75 | 151.00 | 151.75 | 151.45 | 0.30 | 99.80 | 0.78 | 173.56 | 174.34 | 173.90 | 0.44 | 99.75 |
| Chamarajanag | Kollegal | CMC | 11.86 | 23.65 | 35.51 | 36.99 | -1.48 | 104.17 | 9.79 | 28.00 | 37.79 | 25.75 | 12.04 | 68.14 |
| Chamarajanag | Yelandur | TP | 13.39 | 30.75 | 44.14 | 26.84 | 17.30 | 60.81 | 17.09 | 32.25 | 49.34 | 23.87 | 25.47 | 48.38 |
| Chamarajanag | TOTAL | | 232.20 | 846.06 | 1078.26 | 784.73 | 293.53 | 72.78 | 305.07 | 935.77 | 1240.84 | 921.44 | 319.40 | 74.26 |
| Mysuru | Nanjangud | CMC | 129.88 | 424.59 | 554.47 | 322.61 | 231.86 | 58.18 | 231.86 | 445.59 | 677.45 | | 677.45 | 0.00 |
| Mysuru | Hunsur | CMC | 126.55 | 430.00 | 556.55 | 308.55 | 248.00 | 55.44 | 248.00 | 465.00 | 713.00 | 378.09 | 334.91 | 53.03 |
| Mysuru | Hootagalli | CMC | 0.00 | 0.00 | 0.00 | 0.00 | 0.00 | 0.00 | 0.00 | 2000.00 | 2000.00 | 2017.00 | -17.00 | 100.85 |
| Mysuru | K.R.Nagar | TMC | 32.40 | 195.00 | 227.40 | 177.47 | 49.93 | 78.04 | 37.13 | 220.00 | 257.13 | 254.58 | 2.55 | 99.01 |
| Mysuru | Bannuru | TMC | 2.01 | 65.00 | 67.01 | 47.27 | 19.74 | 70.54 | 19.74 | 75.00 | 94.74 | 50.72 | 44.02 | 53.54 |
| Mysuru | T.Narasipura | TMC | 58.67 | 153.30 | 211.97 | 196.10 | 15.87 | 92.51 | 15.87 | 153.30 | 169.17 | 97.44 | 71.73 | 57.60 |
| Mysuru | Periyapatna | TMC | 13.01 | 105.00 | 118.01 | 111.11 | 6.90 | 94.15 | 6.90 | 105.00 | 111.90 | 127.67 | -15.77 | 114.09 |
| Mysuru | H.D.Kote | TMC | 3.01 | 92.00 | 95.01 | 86.00 | 9.01 | 90.52 | 9.01 | 95.00 | 104.01 | 66.01 | 38.00 | 63.47 |
| Mysuru | Sarguru | TP | 5.24 | 38.00 | 43.24 | 44.45 | -1.21 | 102.80 | 0.00 | 40.00 | 40.00 | 38.88 | 1.12 | 97.20 |
| Mysuru | Bogadhi | TP | 0.00 | 0.00 | 0.00 | 0.00 | 0.00 | 0.00 | 26.35 | 200.00 | 226.35 | 155.83 | 70.52 | 68.84 |
| Mysuru | Srirampura | TP | 0.00 | 0.00 | 0.00 | 0.00 | 0.00 | 0.00 | 43.79 | 95.00 | 138.79 | 67.43 | 71.36 | 48.58 |
| Mysuru | Kadakola | TP | 0.00 | 0.00 | 0.00 | 0.00 | 0.00 | 0.00 | 20.35 | 161.52 | 181.87 | 89.44 | 92.43 | 49.18 |
| Mysuru | Rammanahalli | TP | 0.00 | 0.00 | 0.00 | 0.00 | 0.00 | 0.00 | 25.20 | 59.50 | 84.70 | 49.80 | 34.90 | 58.80 |
| Mysuru | Mysuru | CC | 4714.36 | 15000.00 | 19714.36 | 12017.05 | 7697.31 | 60.96 | 7697.31 | 12842.70 | 20540.01 | 16243.46 | 4296.55 | 79.08 |
| Mysuru | TOTAL | | 5085.13 | 16502.89 | 21588.02 | 13310.61 | 8277.41 | 61.66 | 8381.51 | 16957.61 | 25339.12 | 19636.35 | 5702.77 | 77.49 |

26/12/22

Assistant Director (Development)
Directorate of Municipal
Administration
Bengaluru